Reg No B G 155 4 — 4 — 72

55 th Year of Publication ★ 'Satyavadi' Daily, Mysore 4

In the State – The First
Golden Jubilee
Celebrated Paper
★
News, Views, Dharmic
Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಪೂರೈಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸ

ನರ್ಸರಿ ಶಾಲೆಗಳು ಪುರಸಭೆಯ ಆಡಳಿತಕ್ಕೆ

ತಂದೆಯಿಂದ ಮಗನ ಬಲಿ

ಜಲಂಧರಿನಿಂದ ಬಂದಿರುವ ವಾರ್ತೆ ಈ ರೀತಿ ಇದೆ: ಗುರುದಾಸಪುರ್ ಜಿಲ್ಲೆಯ ದೀನಾನಗರದಲ್ಲಿ ಪ್ರಕಾಶ ಚಂದ್ ಎಂಬಾತ ಹದಿನೈದು ವರ್ಷಗಳ ಹಿಂದೆ ಸತ್ತ ತನ್ನ ತಂದೆಯವರ ಆತ್ಮಶಾಂತಿಗಾಗಿ ತನ್ನ ಮೂರು ಮಕ್ಕಳನ್ನು ಬಲಿ ಕೊಡಲು ನಿರ್ಧರಿಸಿ ಬಹಳ ಜನರನ್ನು ಕರೆಸಿ ಕೆಲವು ದಿನಗಳ ಕಾಲ ರಾತ್ರಿಯೆಲ್ಲ ಕೀರ್ತನೆ ಜಾಗರಣೆ ನಡೆಸಿ ಬೆಳಿಗ್ಗೆ ಹಿರಿಯ ಮಗನನ್ನು ಬಲಿಕೊಟ್ಟನು. ಇದನ್ನು ತಿಳಿದು ಮತ್ತಿಬ್ಬರನ್ನು ಕೆಲವರು ಸುರಕ್ಷಿತವಾದ ಸ್ಥಳಕ್ಕೆ ಸಾಗಿಸಿ ಕಾವಾಡಿದರು ಈ ವಿಚಾರವನ್ನು ಪೋಲೀಸರಿಗೆ ತಿಳಿಸಲು ಅವರು ಪ್ರಕಾಶ ಚಂದನನ್ನು, ಅವನ ಸಹೋದರ ಮತ್ತು ಮತ್ತೊಬ್ಬ ಸಹೋದರಿಯರನ್ನು ಬಂಧಿಸಿದರು

★

ಉಕ್ಕಿನ ಬ್ಯಾಂಕ್

ಹಿಂದೂಸ್ತಾನ್ ಸ್ಟೀಲ್ ಸಂಸ್ಥೆಯ ಆಡಳಿತದಲ್ಲಿ ಉಕ್ಕಿನ ಬ್ಯಾಂಕ್ ಸ್ಥಾಪಿಸಲು ಸರ್ಕಾರ ನಿರ್ಧರಿಸಿರುವುದು ಪಾರ್ಲಿಮೆಂಟಿನಲ್ಲಿ ಹೊರಪಟ್ಟಿತು.

★

ಅಜೀಜ್‌ರ ಸ್ಪಷ್ಟನೆ

ಸರ್ಕಾರಿ ಸಾರಿಗೆ ಸಂಸ್ಥೆಯ ಕೆಲಸ ಕಾರ್ಯಗಳ ವಿಚಾರದಲ್ಲಿ ಸಾರಿಗೆ ಮಂತ್ರಿ ಶ್ರೀ ಅಜೀಜ್ ಸೇಟ್‌ರವರು ಅತೃಪ್ತಿ ವ್ಯಕ್ತಪಡಿಸಿ ಅದರಲ್ಲಿ ಭ್ರಷ್ಟಾಚಾರ ನಿರ್ಮೂಲ ಮಾಡಲು ನಿರ್ಧರಿಸಿರುವರು.

★

ಬ್ರಿಟಿಷ್ ಆಡಳಿತ ವಿರುದ್ಧ

ಬೆಲ್‌ಫಾಸ್ಟ್‌ನಿಂದ ಬಂದಿರುವ ವರದಿ ಈ ರೀತಿ ಇದೆ ಉತ್ತರ ಐರ್ಲೆಂಡಿನಲ್ಲಿ ವಿಧಿಸಿರುವ ಪ್ರತಿಬಂಧಕವನ್ನು ಉಲ್ಲಂಘಿಸಿ ಇಪ್ಪತ್ತು ಸಾವಿರ ಜನರು ಐರ್ಲೆಂಡಿನಲ್ಲಿ ಬ್ರಿಟಿಷ್ ಆಡಳಿತ ವಿರುದ್ಧದ 56 ನೇ ವಾರ್ಷಿಕೋತ್ಸವವನ್ನು ಅನೇಕ ನಗರಗಳಲ್ಲಿ ಆಚರಿಸಿದರು.

★ ಸಂತತಿ ನಿರೋಧ ಮಾತ್ರೆ ಸೇವನೆ ಭಾರತದಲ್ಲಿ ತಗ್ಗಿದೆ.

ಪೌರಸಭೆ ಆಡಳಿತಕ್ಕೆ

ಮುಂದಿನ ಜೂನ್ ತಿಂಗಳಿಂದ ಮೈಸೂರು ನಗರದ ಎಲ್ಲ ನರ್ಸರಿ ಸ್ಕೂಲುಗಳನ್ನು ಪೌರಸಭೆ ವಹಿಸಿಕೊಳ್ಳುವ ವಿಚಾರ ಪರ್ಯಾಲೋಚನೆಯಲ್ಲಿದೆಯೆಂದು ಪುರಸಭೆಯ ಅಧ್ಯಕ್ಷರಾದ ಶ್ರೀ ಸೋಮಸುಂದರಂ ತಿಳಿಸಿರುವರು

★

ಭುಟ್ಟೋ ಆರೋಪಣೆ

ಪಾಕೀಸ್ತಾನದಲ್ಲಿ ತನ್ನನ್ನು ಅಧಿಕಾರದಿಂದ ಹೊಕದೂಡುವ ಇಚ್ಛೆ ಭಾರತಕ್ಕಿದೆ ಎಂದು ಪಾಕೀಸ್ತಾನದ ಅಧ್ಯಕ್ಷ ಭುಟ್ಟೋ ತಿಳಿಸಿದರು.

ಜನನ ಸಂಖ್ಯೆ ತಡೆಯಲು

ಜನನ ಸಂಖ್ಯೆಯನ್ನು ತಡೆಯುವ ಉದ್ದೇಶದಿಂದ ವಿವಾಹ ಕನಿಷ್ಠ ವಯಸ್ಸನ್ನು ಶಾಸನ ಮೂಲಕ ಹೆಚ್ಚಿಸುವ ಸರ್ಕಾರದ ಇಚ್ಛೆಯನ್ನು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

ಭಾರತದಿಂದ ರಫ್ತು

1972 ರಲ್ಲಿ ರಫ್ತಿಗೆ ಹದಿನೆಂಟು ಸಹಸ್ರ ಟನ್ ಹೊಗೆಸೊಪ್ಪು ರಫ್ತು ಮಾಡಲು ಸಹಿ ಮಾಡಲಾಗಿದೆ ಎಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

● ವಿಷಮಿಶ್ರ ಸಾರಾಯಿ ಸೇವನೆಯಿಂದ ದೆಹಲಿಯಲ್ಲಿ 30 ಜನ ಸತ್ತರು.

ಮಂತ್ರಿಯವರ ಮರಣ

ತಿರುವೇಂದ್ರಪುರಂನಿಂದ ಬಂದಿರುವ ವರದಿ: ಪ್ರಕಾಶ, ಸೋಮವಾರ ಶಾಸನ ಸಭೆಯಲ್ಲಿ ಭಾಷಣ ಮಾಡುತ್ತಿದ್ದಾಗ, ಕೇರಳದ ಆರ್ಥಮಂತ್ರಿ ಶ್ರೀ ಕೆ. ಸಿ. ಜಾರ್ಜರಿಗೆ ಪಾರ್ಶ್ವವಾಯು ಹೊಡೆದು, ಆಸ್ಪತ್ರೆಗೆ ಸಾಗಿಸಲ್ಪಟ್ಟು ಅಲ್ಲಿ ನಿಧನಹೊಂದಿದರು.

ಹಿತಾಸಕ್ತ ಶಕ್ತಿಗಳು ಕಾಂಗ್ರೆಸ್ಸಿನಲ್ಲಿ ಇದ್ದರೂ ಕೂಡ, ವಾಗ್ದಾನ ಮಾಡಿರುವ ಭೂ ಸುಧಾರಣೆಯನ್ನು ಅಡ್ಡಿಪಡಿಸಲು ಅವಕಾಶ ಕೊಡುವುದಿಲ್ಲವೆಂದು ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸರು ಬೆಂಗಳೂರಿನಲ್ಲಿ ತಿಳಿಸಿದರು.

ಉಗಾದಿ ಬಂಪರ್ ಡ್ರಾ

ಮೈಸೂರು ರಾಜ್ಯದ ಲಾಟರಿ
ರೂ. 20 ಲಕ್ಷಗಳ
ಬಹುಮಾನಗಳು

ಒಂದು ವಿಶೇಷ ಬಹುಮಾನ
ರೂ 5 ಲಕ್ಷಗಳು

1,00,000 ದ
5 ಪ್ರಥಮ ಬಹುಮಾನಗಳು

ಅಧಿಕೃತ ಏಜೆಂಟರು ಮಾರಾಟಗಾರರು:
ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
(ಲಾಟರಿ ವಿಭಾಗ) 'ಹರಿನಿವಾಸ್', 36, ಕನ್ನಿಂಗ್‌ಹ್ಯಾಂ ರಸ್ತೆ,
ಬೆಂಗಳೂರು-1 ಪಿ. ಟಿಲಿ: 26713

ಡ್ರಾ ತೆಗೆಯುವ ತಾರೀಖು 16-4-1972

ಪ್ರತಿ ಟಿಕಟ್ಟಿನ ಬೆಲೆ
ರೂ. 1/- ಮಾತ್ರ

maa-msl-206 Kan

ವಿದ್ಯುತ್ ಗಡಿಯಾರ

1886 ರಲ್ಲಿ ಗ್ರೀನಿಚ್ ಸ್ಟ್ಯಾಂಡರ್ಡ್ ಕಾಲ ಶೋಧನೆಯಾದಾಗ ಫ್ರಾನ್ಸಿನ ಸೈಲ್ವೇ ಕೆಲಸಗಾರರು ಸೂರ್ಯನನ್ನು ನೋಡಿ ಗಡಿಯಾರ ಸರಿಪಡಿಸುವ ಅಭ್ಯಾಸ ನಲ್ಲಿಸಿದರು. ಈಗಾಗಲೇ ಗಡಿಯಾರಗಳಲ್ಲಿ ಟೆಲಿವಿಜ್ಞ ತಯಾರಿಕೆಯೂ ಆರಂಭವಾಗಿದೆ. 5 ಸಾವಿರ ವರ್ಷಗಳ ಹಿಂದೆ ಸೂರ್ಯನ ಮುಖವೇ ನಮಗೆ ಗಡಿಯಾರವೆನಿಸಿದ್ದರೆ, ಇಂದು ಗಡಿಯಾರ ಸಾಧಿಸಿರುವ ಪ್ರಗತಿ ಅದ್ಭುತ. ಜಗ್ಮನರು ಪೂರ್ತಿ ಕಟ್ಟಡಗಳು ವಾಚೂ ತಯಾರಿಸಿದ್ದಾರೆ.

1957 ರಲ್ಲಿ ವಿದ್ಯುತ್ ಗಡಿಯಾರ ವಿದ್ಯುತ್ ಗಡಿಯಾರಕ್ಕೆ 18 ತಿಂಗಳಿಗೊಮ್ಮೆ ವಿದ್ಯುತ್ ಬ್ಯಾಟರಿ ಹಾಕಬೇಕಾಗುತ್ತದೆ. ಡೆಲ್ಲಿಯ ರಾಷ್ಟ್ರೀಯ ಭೌತಶಾಸ್ತ್ರ ಮಂದಿರದಲ್ಲಿರುವ ಗಡಿಯಾರದಲ್ಲಿ ವಿದ್ಯುತ್ ಕಂಪನಾವಸ್ಥೆಯ ಕ್ರಿಸ್ಟಲ್‌ಗಳಿವೆ. ಸ್ಕಾಟ್ಲೆಂಡು ರಾಣಿ ಮೇರಿಯ ಬಳಿಯಲ್ಲಿ ತಲೆಬುರುಡೆಯ ಗಡಿಯಾರವಿತ್ತು ; 1903 ರಲ್ಲಿ ಸೆಂಟ್ ಲೂಯಿ ಜಾತ್ರೆಯಲ್ಲಿ ಪ್ರದರ್ಶಿಸಿದ ಭಾರೀ ಗಡಿಯಾರದ ಬ್ಯಾಲೆನ್ಸ್ ಚಕ್ರ ಒಂದು ಟನ್ ಭಾರವಿತ್ತು ; ರಾಣಿ ಎಲಿಜಬೆತ್‌ಗೆ ಮದುವೆಯಲ್ಲಿ 16 ಜುಯೆಲ್‌ಗಳ ಅತಿ ಚಿಕ್ಕ ಗಡಿಯಾರವೊಂದರ ಉಡುಗೊರೆ ಬಂದಿತ್ತು — ಅದರ ಕೀಲಿ ಚಿನ್ನದ್ದಾಗಿತು [ಸೈ. ಸು.]

ವುಡ್‌ಲಾಂಡ್ 31-3-72 ರಿಂದ ಅಮೋಘ ಪ್ರಾರಂಭ

ಪ್ರಗತಿ ಚಿತ್ರ ಇಂಟರ್ ನ್ಯಾಷನಲ್‌ರವರ ಹಿಂದಿ ಈಸ್ಟ್‌ಮನ್ ಕಲರ್ ಚಿತ್ರ

ಗಂಗಾ ತೇರಾ ಪಾನಿ ಅಮೃತ್

ಪಾತ್ರ : ಅಶೋಕ ಕುಮಾರ್, ನವೀನ್ ನಿಶ್ಚಲ್, ಯೋಗಿಟಾ ಬಾಲಿ, ಶತ್ರುಘ್ನ ಸಿನ್ಹ, ಪ್ರಾಣ್, ರೆಹಮಾನ್, ನಿರೂಪರಾಯ್ ಮುಂತಾದವರು

ಸಂಗೀತ – ರವಿ (ದಿನ 3 ಪ್ರದರ್ಶನಗಳು) ದಿಗ್ದರ್ಶನ – ವೀರೇಂದ್ರ ಸಿನ್ಹ

ಬಾಲ್ಕನಿ ತರಗತಿಗಳಿಗೆ ಬೆಳಿಗ್ಗೆ 11 ರಿಂದ 12 ರ ವರೆಗೆ ಮುಂಗಡ ಟಿಕೆಟ್ ಉಂಟು

ಅಪರಾ 2 ನೇ ವಾರ

ಆಶಾಪರೇಖ್ ಮತ್ತು ನವೀನ ನಿಶ್ಚಲ್ ಪಾತ್ರವಹಿಸಿರುವ

ನವರತ್ನರವರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ

ನಾದಾನ್

ಸಂಗೀತ : ಶಂಕರ್ ಜೈಕಿಶನ್ ದಿಗ್ದರ್ಶಕ : ಹೇಮನ್ ವರ್ಮ

ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Edited Printedand Published by Dharmapracharanirata M.S Krishna Rao (Propretor) at the Satvavadi Press Chamarajapuram Mysore 4

ಶಂಕರಪ್ಪ ಸ್ಮಾರಕ ನಿರ್ಮಿಸಿ

ಎ ಲ್ಲ

ಮೈಸೂರು ನಗರ ಆಡಳಿತ ಕಾಂಗ್ರೆಸ್ ಸಮಿತಿಯ ಗಮನಕ್ಕೆ

ಮೈಸೂರು ರಾಜ್ಯ ಆಡಳಿತ ಕಾಂಗ್ರೆಸ್ ಗಮನಕ್ಕೆ

ಮೈಸೂರು ಮಂತ್ರಿಮಂಡಲದ ಗಮನಕ್ಕೆ

ಒಳಾಡಳಿತ ಶಾಖೆಯನ್ನು ಹೊಂದಿರುವ ಮುಖ್ಯ ಮಂತ್ರಿಯವರಾದ ಸನ್ಮಾನ್ಯ ಶ್ರೀ ಡಿ. ದೇವರಾಜ ಅರಸ್ ಅವರ ಸನ್ನಿಧಿಗೆ

1942 ರ ಸ್ವಾತಂತ್ರ್ಯ ಹೋರಾಟದಲ್ಲಿ ಮೈಸೂರು ಕಾರಾಗೃಹದಲ್ಲಿ ಹುತಾತ್ಮರಾದ ಶಂಕರಪ್ಪನಿಗೆ ಸೂಕ್ತ ಸ್ಮಾರಕ ರಚಿಸಿ

ಶಂಕರಪ್ಪ ಮೆಡಿಕಲ್ ವಿದ್ಯಾರ್ಥಿ. ಅವರೊಡನೆ ಕಾರಾಗೃಹದಲ್ಲಿ ಇದ್ದ, ಈಗ ಪ್ರಧಾನರ ಬಳಿ ಸೇವೆ ಸಲ್ಲಿಸುತ್ತಿರುವ ಶ್ರೀ ಹೆಚ್ ವೈ. ಶಾರದಾ ಪ್ರಸಾದ್ ಮತ್ತು ಚೆತ್ರೋಡ್ಯಮ್ ಶ್ರೀ ಎಂ. ವಿ ಕೃಷ್ಣಸ್ವಾಮಿ ಶಂಕರಪ್ಪನ ಬಗೆಗೆ ವಿಚಾರ ತಿಳಿಸಲು ಸಮರ್ಥರು

★

Protect the Cow

★

ಟೆಂಡರ್ ಪ್ರಕಟಣೆ

ನಂ. 12/71-72

ತಾ|| 24-3-1972

ಈ ಕೆಳಗೆ ಸೂಚಿಸಿರುವ ಕೆಲಸಕ್ಕಾಗಿ ಮೊಹರಿಕೃತವಾಗಿರುವ ಸಂಸ್ಥೆಗಳಿಂದ ಲಕೋಟೆಯಲ್ಲಿ-ಮೇಲೆ-ಕೆಲಸದ ಹೆಸರು ಬರೆದಿರುವ ಮೊಹರಾದ ಟೆಂಡರ್‌ಗಳನ್ನು ವಿಧಾಯಕವಾಹ ಫಾರಂಗಳಲ್ಲಿ ದ್ವಿಪ್ರತಿಗಳಲ್ಲಿ ಆಹ್ವಾನಿಸಲಾಗಿದೆ ಮತ್ತು ಕೆ. ಆರ್. ಸಾಗರದಲ್ಲಿರುವ, ಕೆ ಆರ್. ಸಾಗರ ವಿಭಾಗದ, ಎಕ್ಸಿಕ್ಯೂಟೀವ್ ಇಂಜಿನಿಯರ್‌ರವರಿಂದ 12-4-1972 ರ ಮಧ್ಯಾಹ್ನ 4 ಗಂಟೆ ವರೆಗೆ ಸ್ವೀಕರಿಸಲಾಗುವುದು. ಫಾರಂ ಪೂರಾಟದ ವಿಧಾಯಕವಾದ ಹಣವನ್ನು ಪಾವತಿ ಮಾಡಿದಲ್ಲಿ (ವಾಪಸು ಮಾಡಲಾಗುವುದಿಲ್ಲ) ಖಾಲಿ ಟೆಂಡರ್ ಫಾರಂಗಳನ್ನು ಕಚೇರಿ ಕೆಲಸದ ವೇಳೆಗಳಲ್ಲಿ ಕೆಲಸದ ಎಲ್ಲ ದಿನಗಳಲ್ಲಿ 6-4-72 ರಿಂದ 11-4-72 ರ ವರೆಗೆ ಕೊಡಲಾಗುವುದು. ಕಾಲಂ ನಂ. 4 ರಲ್ಲಿ ಸೂಚಿಸಿರುವ ಆರ್ನೆಸ್ಟ್ ಹಣ ಠೇವಣಿಯನ್ನು ಡಿಪಾಜಿಟ್ ಮಾಡಿದುದಕ್ಕೆ ಖಜಾನೆಯ ದ್ವಿಪ್ರತಿ ಚಲನ್‌ನನ್ನು ಟೆಂಡರ್-ನೊಡನೆ ಕೊಡತಕ್ಕದ್ದು. ಸ್ಥಾಯೀ ಠೇವಣಿಯನ್ನು ಅವರೇನಾದರೂ ಪಾವತಿ ಮಾಡಿದ್ದಲ್ಲಿ, ಆರ್ನೆಸ್ಟ್ ಹಣ ಠೇವಣಿಯನ್ನು ಪಾವತಿ ಮಾಡಲು ವಿನಾಯಿತಿ ಪಡೆದಿರುವ ಕಾಪಿಯನ್ನು ಟೆಂಡರ್ ಸಲ್ಲಿಸುವ ಕಾಲದಲ್ಲಿ ಟೆಂಡರ್ ನೊಡನೆ ಲಗತ್ತಿಸತಕ್ಕದ್ದು.

ಯಾವುದೇ ಅಥವಾ ಎಲ್ಲ ಟೆಂಡರ್‌ಗಳನ್ನು ಯಾವುದೇ ಕಾರಣಗಳನ್ನು ಕೊಡದೇ ನಿರಾಕರಿಸುವ ಹಕ್ಕು ತಕ್ಕ ಅಧಿಕಾರಿಯವರಿಗೆ ವೀಸಲಾಗಿದೆ.

ಕಚೇರಿ ಕೆಲಸದ ವೇಳೆಗಳಲ್ಲಿ ಕೆಲಸದ ಎಲ್ಲ ದಿನಗಳಲ್ಲಿ ಕೆ. ಆರ್. ಸಾಗರದಲ್ಲಿ ಕಾಣ, ಕೆ. ಆರ್. ಸಾಗರ ವಿಭಾಗದ, ಎಕ್ಸಿಕ್ಯೂಟೀವ್ ಇಂಜಿನಿಯರ್‌ರವರ ಕಚೇರಿಯಿಂದ ಹೆಚ್ಚು ವಿವರಗಳನ್ನು ಪಡೆಯಬಹುದು.

1. ಸೀ. ನಂ. 1
2. ಕೆಲಸದ ಹೆಸರು ಕೃಷ್ಣರಾಜ ಸಾಗರದ ಬೃಂದಾವನ ಗಾರ್ಡನ್ಸ್‌ನಲ್ಲಿ ಗಾಜಿನ ಮನೆಯ ನಿರ್ಮಾಣದ ಕೆಲಸಕ್ಕಾಗಿ, ಕೆಲಸದ ಸ್ಥಳಕ್ಕೆ ಕೊಡುವುದು ಸೇರಿ ಸೂಕ್ತವಾದ ಡಿಸೈನ್‌ಗಳ ಕೊಳವೆ ಆಕಾರದ ಟ್ರಸಸ್‌ಗಳನ್ನು ತಯಾರಿಸುವುದು, ಸ್ಥಳಬಲಾಜ ಮಾಡುವುದು ಮತ್ತು ಕಟ್ಟುವುದು.
3. ಟೆಂಡರ್‌ಗೆ ಇಟ್ಟಿರುವ ಅಂದಾಜು ಮೊತ್ತ ರೂ. 27,500/-
4. ಆರ್ನೆಸ್ಟ್ ಹಣ ಠೇವಣಿ ರೂ 688/-
5. ಟೆಂಡರ್ ಫಾರಂದರ (ಎರಡು ಫಾರಂಗಳ ಒಂದು ಸೆಟ್) ರೂ 5 ಪ್ಲಸ್ ರೂ 5/-
6. ಕೆಲಸ ಮುಗಿಸಲು ಕಾಲಾವಧಿ ಮೂರು ತಿಂಗಳು

ಸಹಿ/-

ಎಕ್ಸಿಕ್ಯೂಟೀವ್ ಇಂಜಿನಿಯರ್,

ಕೆ ಆರ್ ಸಾಗರ ವಿಭಾಗ